ನಾನು ಕಂಡ ವಿವೇಕಾನಂದ



ಡಾ.ಆರ್. ಬಾಲಸುಬ್ರಹ್ಮಣ್ಯಂ

# ಬದುಕಿನ ಪರೀಕ್ಷೆಗೆ ಬೇಕು ಕಷ್ಟ!

ಕಷ್ಟದ ದಿನಗಳಲ್ಲೇ ನಮ್ಮ ನಿಜವಾದ ಗುಣ ಸ್ವರೂಪದ ಪರೀಕ್ಷೆ ಆಗುವುದು. ಎಲ್ಲವೂ ನಾವು ಅಂದುಕೊಂಡಂತೆ ನಡೆದುಕೊಂಡು ಹೋಗುತ್ತಿದ್ದರೆ ಬದುಕು ಅಷ್ಟೇನೂ ಕಷ್ಟ ಎನಿಸದು. ಯಾವಾಗ ಕಷ್ಟದ ದಿನಗಳು ಬರಲಾರಂಭಿಸುತ್ತವೋ, ನಮ್ಮ ಸುತ್ತಮುತ್ತಲಿನ ಸಂಗತಿಗಳು ಸತತವಾಗಿ ನಮಗೆ ಸವಾಲೊಡ್ಡುತ್ತವೋ ಆಗಷ್ಟೇ ನಮ್ಮ ನಿಜವಾದ ಗುಣ ಹೊರಗೆ ಬರುತ್ತದೆ.

ಆದರ್ಶಗಳ ಬಗ್ಗೆ ಮಾತನಾಡುವುದು ಮತ್ತು ಅದರಂತೆ ಬದುಕಲು ಯತ್ನಿಸುವುದು ದಿನನಿತ್ಯದ ಅಸ್ತಿತ್ವದ ಪ್ರಶ್ನೆಯನ್ನು ನಾವು ಎದುರಿಸದೇ ಇದ್ದಾಗ ಬಹಳ ಸುಲಭವಾದ ಕಾರ್ಯದಂತೆ ಕಾಣುತ್ತದೆ. ಆದರೆ ಪ್ರತಿ ನಿತ್ಯವೂ ನಮಗೆ ಪರೀಕ್ಷೆ ಎದುರಾದಾಗಲೂ ನಮ್ಮ ಆದರ್ಶಗಳನ್ನು ಉಳಿಸಿಕೊಂಡು, ಅದರಂತೆ ಜೀವಿಸುವ ಸಾಮರ್ಥ್ಯವನ್ನು ನಾವು ಹೊಂದಿದಾಗಲೇ ನಮ್ಮ ಸಂಕಲ್ಪಗಳ ನಿಜವಾದ ಪರೀಕ್ಷೆ ಆಗುವುದು. ಯುವ ನರೇಂದ್ರರ ಬದುಕೂ ಇದರಿಂದ ಹೊರತಾಗಿರಲಿಲ್ಲ.

1884ರ ಆರಂಭದಲ್ಲಿ ಅವರು ಆಗಷ್ಟೇ ತಮ್ಮ ತಂದೆಯನ್ನು ಕಳೆದುಕೊಂಡಿದ್ದರು. ಈ ಕಾರಣದಿಂದ ಅಚಾನಕ್ಕಾಗಿ ಬದುಕಿನ ಕಟು ವಾಸ್ತವಕ್ಕೆ ತೆರೆದುಕೊಂಡ ಅವರು, ಅದು ಜೊತೆಗೆ ಹೊತ್ತು ತಂದ ಕಠಿಣ ಸವಾಲುಗಳನ್ನೂ ಎದುರಿಸಬೇಕಾಯಿತು. ತಂದೆಯ ಸಾವು ಅವರ ಇಡೀ ಕುಟುಂಬವನ್ನೇ ಅಸಹಾಯಕ ಪರಿಸ್ಥಿತಿಗೆ ದೂಡಿಬಿಟ್ಟಿತ್ತು. ವಿಶ್ವನಾಥ ದತ್ತರು ಬದುಕಿದ್ದಾಗ ತಾವು ಸಂಪಾದನೆ ಮಾಡುತ್ತಿದ್ದುದಕ್ಕಿಂತಲೂ ಹೆಚ್ಚಿನದನ್ನು ಖರ್ಚು ಮಾಡುತ್ತಿದ್ದರು. ಇದರಿಂದ ಅವರಿಗೆ ಹಣ ಕೊಟ್ಟಿದ್ದ ಸಾಲಗಾರರ ಕಾಟವನ್ನು ಸಹ ನರೇಂದ್ರನಾಥರು ಎದುರಿಸಬೇಕಾಯಿತು. ಯಾವ ಆದಾಯವೂ ಇಲ್ಲದ ನರೇಂದ್ರ 7- 8 ಜನರ ಕುಟುಂಬವನ್ನು ಸಲಹಬೇಕಾಗಿತ್ತು. ಅವು ನಿಜಕ್ಕೂ ತೀವ್ರ ಕಷ್ಟದ ದಿನಗಳಾಗಿದ್ದವು. ಮೊದಲೆಲ್ಲಾ ಇಂತಹ ಕಷ್ಟಗಳ ಪರಿವೆಯೇ ಇಲ್ಲದೆ ನೆಮ್ಮದಿಯಾಗಿದ್ದ ನರೇಂದ್ರರಿಗೆ ಇದ್ದಕ್ಕಿದ್ದಂತೆಯೇ ಹಸಿವಿನಿಂದ ನರಳಬೇಕಾದ ಸ್ಥಿತಿ ಬಂದೊದಗಿತು. ಇಂತಹ ಸಂದರ್ಭದಲ್ಲೂ ಅವರು ತಮ್ಮ ಕಾನೂನು ಪದವಿಯನ್ನು ಮುಂದುವರಿಸಲು ಸಫಲರಾದರು. ಕಾಲೇಜಿನಲ್ಲಿ ಅವರು ಕಡು ಬಡ ವಿದ್ಯಾರ್ಥಿಯಾಗಿದ್ದರು. ಬಹಳಷ್ಟು ದಿನ ಖಾಲಿ ಹೊಟ್ಟೆಯಲ್ಲೇ ತರಗತಿಗೆ ಹೋಗುತ್ತಿದ್ದರು. ಹಸಿವು ಮತ್ತು ನಿಶ್ಶಕ್ತಿಯಿಂದ ಆಗಾಗ್ಗೆ ಅವರಿಗೆ ಬವಳಿ ಬಂದಂತಾಗುತ್ತಿತ್ತು.

ಸ್ನೇಹಿತರು ಕೆಲವೊಮ್ಮೆ ಅವರನ್ನು ತಮ್ಮ ಮನೆಗಳಿಗೆ ಆಹ್ವಾನಿಸುತ್ತಿದ್ದರು. ಆಗೆಲ್ಲಾ ಅವರೊಂದಿಗೆ ಖುಷಿಯಿಂದ ಹರಟುತ್ತಾ ಕುಳಿತಿರುತ್ತಿದ್ದ ನರೇಂದ್ರರಿಗೆ, ಅವರು 'ಊಟಕ್ಕೆ ಏಳೋಣ' ಎಂದಾಗ ಮಾತ್ರ ದಿಕ್ಕಿಲ್ಲದ ತಮ್ಮ ಮನೆಯ ಪರಿಸ್ಥಿತಿ ಕಣ್ಮುಂದೆ ಬಂದುಬಿಡುತ್ತಿತ್ತು. ಅದು ಊಟ ಮಾಡದಂತೆ ಅವರನ್ನು ತಡೆಯುತ್ತಿತ್ತು. ತಾವೆಲ್ಲೋ ಬೇರೆಡೆ ಹೋಗಬೇಕಾದ್ದರಿಂದ ಊಟ ಮಾಡಲಾಗದು ಎಂದು ಅವರು ತಪ್ಪಿಸಿಕೊಂಡು ಬಿಡುತ್ತಿದ್ದರು. ಮನೆಗೆ ಬಂದ ಮೇಲೆ, ಮನೆಯ ಇತರರಿಗೂ ಉಳಿಯಲಿ ಎಂಬ ಕಾರಣಕ್ಕೆ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ತಿನ್ನುತ್ತಿದ್ದರು. ಕೆಲವೊಮ್ಮೆ 'ನಾನಾಗಲೇ ಸ್ನೇಹಿತರ ಮನೆಯಲ್ಲಿ ಊಟ ಮಾಡಿ ಬಂದಿದ್ದೇನೆ' ಎಂದು ಹೇಳಿ ಮನೆಯಲ್ಲಿ ಊಟವನ್ನೇ ಮಾಡುತ್ತಿರಲಿಲ್ಲ. ತಾಯಿ ಮತ್ತು ಮನೆಯ ಇತರರಾದರೂ ಹೊಟ್ಟೆ ತುಂಬಾ ಉಣ್ಣಲಿ ಎಂಬ ಕಳಕಳಿ ಅದರ ಹಿಂದಿತ್ತು. 1902ರಲ್ಲಿ ನರೇಂದ್ರ ಅವರ ಕಾಲಾನಂತರ ತಾಯಿ ಭುವನೇಶ್ವರಿ, ಮಗ ಮಾಡುತ್ತಿದ್ದ ಇಂತಹ ತ್ಯಾಗಗಳನ್ನು ಸ್ಮರಿಸುತ್ತಿದ್ದರು.



ಇಷ್ಟೆಲ್ಲಾ ಬಡತನ ಮತ್ತುದುಃಸ್ಥಿತಿಯ ನಡುವೆಯೂ ನರೇಂದ್ರ ಎಂದಿನಂತೆ ಸಂತಸದಲ್ಲೇ ಇರುತ್ತಿದ್ದರು. ಪ್ರತಿಷ್ಠೆ ಸಹ ಇತರರೊಂದಿಗೆ ತಮ್ಮ ಸಮಸ್ಯೆಗಳನ್ನು ಹಂಚಿಕೊಳ್ಳದಂತೆ ಅವರನ್ನು ತಡೆಯುತ್ತಿತ್ತು. ಹೀಗಾಗಿ ನರೇಂದ್ರರ ಬದುಕಿನಲ್ಲಿ ಏನು ನಡೆಯುತ್ತಿದೆ ಎಂಬುದು ಅವರ ಸ್ನೇಹಿತರಿಗೂ ತಿಳಿಯುತ್ತಿರಲಿಲ್ಲ. ದಿನೇ ದಿನೇ ಕೃಶವಾಗುತ್ತಿದ್ದ ಅವರನ್ನು ನೋಡಿ ತಂದೆಯ ಸಾವಿನ ದುಃಖದಿಂದ ಅವರು ಹೀಗಾಗುತ್ತಿದ್ದಾರೆ ಎಂದೇ ಹಲವರು ಭಾವಿಸಿದ್ದರು.

ಇಷ್ಟೆಲ್ಲಾ ಸಾಲದೆಂಬಂತೆ ಅವರ ಸಂಬಂಧಿಕರಲ್ಲಿ ಹಲವು ಮಂದಿ ಅವರ ಕುಟುಂಬದ ಶತ್ರುಗಳಾಗಿ ಬದಲಾಗಿದ್ದರು. ಪೂರ್ವಜರಿಂದ ಕುಟುಂಬಕ್ಕೆ ಬಂದಿದ್ದ ಮನೆಯ ಮೇಲೆ ಅವರ ಕಣ್ಣು ಬಿದ್ದಿತ್ತು. ಕಡೆಗೆ ಅವರೆಲ್ಲಾ ಸೇರಿ ಮನೆಯನ್ನೇ ಕಿತ್ತುಕೊಂಡರು. ಬಳಿಕ ಈ ವಿವಾದ ಸ್ಥಳೀಯ ಕೋರ್ಟ್‌ನ ಮೆಟ್ಟಿಲು ಹತ್ತಿತು. ಆಗ ನರೇಂದ್ರರ ಕುಟುಂಬ ನಿಲ್ಲಲು ನೆಲೆಯಿಲ್ಲದೆ ಅಜ್ಜಿಯ ಮನೆಗೆ ಸ್ಥಳಾಂತರಗೊಂಡಿತು. ದೇಶದ ಇತರ ಪ್ರಕರಣಗಳಂತೆಯೇ ಈ ಪ್ರಕರಣವೂ ಇತ್ಯರ್ಥವಾಗಲು ಸಾಕಷ್ಟು ಸಮಯವನ್ನೇ ತೆಗೆದುಕೊಂಡಿತು. ಇದರಿಂದ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿತು. ಅಂತಿಮವಾಗಿ ನರೇಂದ್ರರ ಕುಟುಂಬದ ಪರವಾಗಿಯೇ ಆದೇಶ ಹೊರಬಿದ್ದು ಆಸ್ತಿಯ ಪಾಲನ್ನು ಅವರು ಪಡೆಯುವಂತಾಯಿತು. ನಂತರ ಅವರೆಲ್ಲಾ ತಮ್ಮ ಮನೆಗೆ ವಾಪಸ್ ಬರುವಷ್ಟರಲ್ಲಾಗಲೇ ನರೇಂದ್ರರು ಲೌಕಿಕ ಪ್ರಪಂಚವನ್ನು ತ್ಯಜಿಸಿ ಸನ್ಯಾಸತ್ವ ಸ್ವೀಕರಿಸಿಯಾಗಿತ್ತು.

ನರೇಂದ್ರನಾಥರು ತಮ್ಮ ಬದುಕಿನ ಇಂತಹ ಕಷ್ಟದ ಅನುಭವಗಳನ್ನು ಆಗಾಗ್ಗೆ ಸ್ಮರಿಸುತ್ತಿದ್ದರು. ಅವರು ವಿವರಿಸಿದ ಅಂತಹ ಸಂದರ್ಭವೊಂದನ್ನು ಸ್ವಾಮಿ ಶಾರದಾನಂದರು ಹೀಗೆ ನೆನಪಿಸಿಕೊಂಡಿದ್ದಾರೆ. 'ಅಪ್ಪನ ಸಾವಿನ ಶೋಕಾಚರಣೆ ದಿನಗಳು ಮುಗಿಯುವ ಮೊದಲೇ ನಾನು ಕೆಲಸ ಹುಡುಕಿಕೊಂಡು ಹೊರಟಿದ್ದೆ. ಕೆಂಡದಂತೆ ಸುಡುತ್ತಿದ್ದ ಬಿಸಿಲಿನಲ್ಲಿ ಹಸಿವು ಮತ್ತು ಬರಿಗಾಲಲ್ಲೇ ಅರ್ಜಿ ಹಿಡಿದುಕೊಂಡು ಕಚೇರಿಯಿಂದ ಕಚೇರಿಗೆ ಅಲೆದಾಡುತ್ತಿದ್ದೆ. ಕಷ್ಟದ ದಿನಗಳಲ್ಲಿ ನನ್ನೊಂದಿಗಿದ್ದ ಒಂದಿಬ್ಬರು ಗೆಳೆಯರು ಕೆಲವೊಮ್ಮೆ ಜೊತೆಯಲ್ಲಿ ಬರುತ್ತಿದ್ದರು. ಆದರೆ ಎಲ್ಲ ಕಡೆಯೂ ನನ್ನ ಮುಖಕ್ಕೆ ಹೊಡೆದಂತೆ ಬಾಗಿಲು ಹಾಕಲಾಗುತ್ತಿತ್ತು. ಹೀಗೆ ಜೀವನದಲ್ಲಿ ಮೊದಲ ಬಾರಿಗೆ ಬದುಕಿನ ಕಟು ವಾಸ್ತವದ ಅರಿವಾದ ನನಗೆ, ಈ ಪ್ರಪಂಚದಲ್ಲಿ ನಿಸ್ವಾರ್ಥ ಅನುಕಂಪ ಅತ್ಯಂತ ವಿರಳ ಎಂಬುದು ತಿಳಿಯಿತು. ನಿಶ್ಶಕ್ತರು, ಬಡವರು ಮತ್ತು ದಿಕ್ಕಿಲ್ಲದವರಿಗಂತೂ ಅದು ಸಿಗುವುದೇ ಇಲ್ಲ'.

ಬಡವರು ಹಾಗೂ ದುರ್ಬಲ ಸಮುದಾಯಗಳ ಪರವಾದ ಸ್ವಾಮೀಜಿಯ ಜನಜನಿತ ಕಾಳಜಿಯು ಅವರು ಕಂಡುಂಡ ಇಂತಹ ಅನುಭವಗಳ ಫಲವೇ ಆಗಿದ್ದು, ಅವರ ಆಲೋಚನಾ ಧಾಟಿ ಮತ್ತು ಭವಿಷ್ಯದ ಕಾರ್ಯಗಳ ಮೇಲೂ ಪರಿಣಾಮ ಬೀರಿರುವ ಸಾಧ್ಯತೆ ಇದೆ. ◆